**ದಿನಾಂಕಃ 04.12.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀಮತಿ ಎಸ್.ಎಂ. ರವರಿಂದಃ**

1) **KA-51-HM-4841** ಸಂಖ್ಯೆಯ ವಾಹನವು **2020** ನೇ ಇಸವಿಯಲ್ಲಿ ತಯಾರು ಆಗಿರುವಂತಹ ವಾಹನ ಆಗಿದೆ ಎಂದರೆ ಸರಿ.

2) ಮೇಲೆ ಹೇಳಿದ **KA-51-HM-4841** ಸಂಖ್ಯೆಯ ವಾಹನವನ್ನು ಶೋ ರೂಂ ನಿಂದ ಹೊರಗೆ ಕಳುಹಿಸುವ ಸಮಯದಲ್ಲಿಯೇ ಸದರಿ ವಾಹನಕ್ಕೆ **5** ವರ್ಷಗಳ ಕಾಲಕ್ಕೆ ಅನ್ವಯ ಆಗುವಂತಹ ವಿಮಾ ಪಾಲಿಸಿಯನ್ನು ನೀಡಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಸದರಿ ವಾಹನಕ್ಕೆ ನೀಡಿರುವಂತಹ ವಿಮಾ ಪಾಲಿಸಿಯು ಮೊದಲನೇ ವರ್ಷಕ್ಕೆ **Comprehensive policy** ಆಗಿದೆ ಮತ್ತು ಉಳಿದ **4** ವರ್ಷಗಳಿಗೆ ಕೇವಲ **Liability only policy** ಅಥವಾ **Act policy** ಆಗಿದೆ" ಎಂದು ನುಡಿದಿದ್ದಾರೆ.

3) ಮೇಲೆ ಹೇಳಿದಂತಹ ವಾಹನಕ್ಕೆ ನಾವು ನೀಡಿದ್ದಂತಹ ವಿಮಾ ಪಾಲಿಸಿಯು ದಿ.**06.01.2020** ರಿಂದ ದಿ.**05.01.2025** ರವರೆಗೆ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ.

4) **IRDA** ನಿಯಮಗಳ ಪ್ರಕಾರ ಒಂದು ಖಾಸಗಿ ದ್ವಿಚಕ್ರ ವಾಹನಕ್ಕೆ ವಿಮಾ ಪಾಲಿಸಿಯನ್ನು ಕೊಟ್ಟರೆ ಒಟ್ಟು **5** ವರ್ಷಗಳ ಕಾಲ ಚಾಲ್ತಿಯಲ್ಲಿ ಇರಬೇಕೆಂದು ಮತ್ತು ಖಾಸಗಿ **4** ಚಕ್ರಗಳ ವಾಹನಕ್ಕೆ ವಿಮಾ ನೀಡಿದರೆ ಆ ಪಾಲಿಸಿಯು **3** ವರ್ಷಗಳ ಕಾಲ ಚಾಲ್ತಿಯಲ್ಲಿ ಇರಬೇಕು ಎಂದು ಸೂಚನೆಯನ್ನು ನೀಡಲಾಗಿದೆ ಎಂದರೆ **2018** ನೇ ಇಸವಿಯಲ್ಲಿ ಅಂತಹ ಸೂಚನೆಯನ್ನು ನೀಡಲಾಗಿತ್ತು, ಆದರೆ ಆ ಸೂಚನೆಗಳಿಗೆ ಅಥವಾ ನಿಯಮಗಳಿಗೆ **2** ವರ್ಷಗಳ ನಂತರ ತಿದ್ದುಪಡಿಯನ್ನು ಮಾಡಿದ್ದಾರೆ ಮತ್ತು ಆ ತಿದ್ದುಪಡಿಯ ಪ್ರಕಾರ ಪಾಲಿಸಿಯನ್ನು ನೀಡಿದ ದಿನದಿಂದ ಪ್ರಥಮ ಒಂದು ವರ್ಷಕ್ಕೆ ಮಾತ್ರ **Comprehensive policy** ಆಗಿರುತ್ತದೆ ಮತ್ತು ಉಳಿದ **4** ವರ್ಷಗಳಿಗೆ ಕೇವಲ **Liability only policy** ಆಗಿರುತ್ತವೆ.

5) ಮೇಲೆ ಹೇಳಿದಂತಹ **KA-51-HM-4841** ಸಂಖ್ಯೆಯ ವಾಹನಕ್ಕೆ ನಾವು ವಿಮಾ ಪಾಲಿಸಿಯನ್ನು ನೀಡಿದ್ದೆವು ಮತ್ತು ಆ ವಿಮಾ ಪಾಲಿಸಿಯನ್ನು **5** ವರ್ಷಗಳ ಅವಧಿಗೆ ನೀಡಲಾಗಿತ್ತು ಮತ್ತು ಆ **5** ವರ್ಷಗಳ ಕಾಲ ಪೂರ್ತಿಯಾಗಿ ಎಲ್ಲಾ ರೀತಿಯ ಹೊಣೆಗಾರಿಕೆಗಳನ್ನು ಒಳಗೊಳ್ಳುವಂತಹ **Comprehensive policy** ಆಗಿರುತ್ತವೆ ಎಂದರೆ ಸುಳ್ಳು.

6) **Go Digit** ವಿಮಾ ಸಂಸ್ಥೆಯ ಎಲ್ಲಾ ವ್ಯವಹಾರಗಳನ್ನು ಕೇವಲ

**Online** ಮೂಲಕ ಮಾಡಲಾಗುತ್ತದೆ, ಆ ಕಾರಣದಿಂದ ಒಬ್ಬ ವ್ಯಕ್ತಿಯು ವಿಮಾ ಪಾಲಿಸಿಯನ್ನು ಖರೀದಿ ಮಾಡುವ ಸಮಯದಲ್ಲಿ ಯಾವುದೇ **proposal** ಗಳನ್ನು ಕೈ ಬರಹದಲ್ಲಿ ಕೊಡುವಂತಹ ಸಂದರ್ಭವೇ ಬರುವುದಿಲ್ಲ.

7) **KA-51-HM-4841** ಸಂಖ್ಯೆಯ ವಾಹನದ ಮಾಲೀಕರು **Bundled policy** ಅನ್ನು ಕೊಡಿ ಎಂದು ನಿರ್ದಿಷ್ಟವಾಗಿ ನಮ್ಮ ಸಂಸ್ಥೆಯನ್ನು ಕೇಳಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿಯು ಮುಂದುವರೆದು "**Online** ನಿಂದ ಆ ದಾಖಲೆಯನ್ನು ಪಡೆದು ಹಾಜರುಪಡಿಸುತ್ತೇನೆ" ಎಂದು ನುಡಿದಿದ್ದಾರೆ.

8) ಯಾವ ವಿಮಾ ಪಾಲಿಸಿಯನ್ನು ನಾನು **Bundled policy** ಎಂದು ಹೇಳುತ್ತಾ ಇದ್ದೇನೋ ಅದೇ ಪಾಲಿಸಿಯೇ **Comprehensive policy** ಆಗಿದೆ ಎಂದರೆ ಸುಳ್ಳು.

9) **2018** ರಿಂದ **2020** ನೇ ಇಸವಿಯ ಮಧ್ಯದಲ್ಲಿ ಯಾವುದೇ ಒಂದು **Bundled policy** ಅನ್ನು ನೀಡಿದ್ದ ಪಕ್ಷದಲ್ಲಿ ಸದರಿ ಪಾಲಿಸಿಯು **5** ವರ್ಷಗಳ ಕಾಲವು **Comprehensive policy** ಆಗಿಯೇ ಇರುತ್ತದೆ ಎಂದರೆ ಸುಳ್ಳು.

10) **Own damage** ಎಂಬ ತಲೆಬರಹದ ಅಡಿಯಲ್ಲಿ ನಾವು ಯಾವುದೇ ಹೆಚ್ಚುವರಿ **premium** ಪಡೆದುಕೊಂಡರೆ ಅದು ಕೇವಲ ವಾಹನಕ್ಕೆ ಆಗುವಂತಹ ಜಖಂಗಳು ಇತ್ಯಾದಿಗಳಿಗೆ ಮಾತ್ರ ಅನ್ವಯವಾಗುತ್ತದೆ ಮತ್ತು ದ್ವಿಚಕ್ರ ವಾಹನದಲ್ಲಿ ಪ್ರಯಾಣ ಮಾಡುವಂತಹ ಹಿಂಬದಿಯ ಸವಾರನಿಗೆ ಅನ್ವಯ ಆಗುವುದಿಲ್ಲ ಎಂದರೆ ಸುಳ್ಳು.

11) **KA-51-HM-4841** ಸಂಖ್ಯೆಯ ವಾಹನಕ್ಕೆ ನೀಡಿದ್ದಂತಹ ವಿಮಾ ಪಾಲಿಸಿಯು **Comprehensive policy** ಆಗಿದೆ ಮತ್ತು ಈ ಪ್ರಕರಣದಲ್ಲಿ ಇರುವಂತಹ ಅಪಘಾತವು ಆ ವಿಮಾ ಪಾಲಿಸಿಯು ಚಾಲ್ತಿಯಲ್ಲಿ ಇರುವಾಗಲೇ ಸಂಭವಿಸಿದೆ ಮತ್ತು ಆ ಕಾರಣದಿಂದ ನಾವು ಅರ್ಜಿದಾರರಿಗೆ ಪರಿಹಾರವನ್ನು ಕೊಡಬೇಕಾಗಿದೆ ಎಂದರೆ ಸುಳ್ಳು.

12) ಒಂದು ಸ್ಕೂಟರ್ ನಲ್ಲಿ ಪ್ರಯಾಣ ಮಾಡುವಂತಹ ಹಿಂಬದಿಯ ಸವಾರನೂ ಸಹಾ **Third party** ಎಂಬ ಪದದ ವ್ಯಾಪ್ತಿಯ ಒಳಗೆ ಬರುತ್ತಾರೆ ಎಂದರೆ ಸುಳ್ಳು.

13) ಮೇಲೆ ಹೇಳಿದಂತಹ ವಾಹನವನ್ನು ಶೋ ರೂಂ ನಿಂದ ಹೊರಗೆ ಕಳುಹಿಸುವ ಸಮಯದಲ್ಲಿಯೇ ನಾವು ವಿಮಾ ಪಾಲಿಸಿಯನ್ನು ನೀಡಿದ್ದೇವೆ ಮತ್ತು ಸೂಕ್ತವಾದ **premium** ಗಳನ್ನು ಪಡೆದುಕೊಂಡಿದ್ದೇವೆ ಮತ್ತು

ಈಗ ನಮ್ಮ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸದರಿ ಪಾಲಿಸಿಯ ಒಳಗೆ **pillion rider** ಬರುವುದಿಲ್ಲ ಎಂಬ ನಿಲುವನ್ನು ತೆಗೆದುಕೊಂಡಿದ್ದೇವೆ ಎಂದರೆ ಸುಳ್ಳು.

14) **Act policy** ಒಂದನ್ನು ಹೊರತು ಪಡಿಸಿದರೆ ಬೇರೆ ಎಲ್ಲಾ ರೀತಿಯ ವಿಮಾ ಪಾಲಿಸಿಗಳನ್ನು ಕೊಟ್ಟಂತಹ ಸಂದರ್ಭದಲ್ಲಿ ಅಂತಹ ವಿಮಾ ಪಾಲಿಸಿಯ ವ್ಯಾಪ್ತಿಯ ಒಳಗೆ ಒಂದು ದ್ವಿಚಕ್ರ ವಾಹನದ ಹಿಂಬದಿಯ ಸವಾರನೂ ಸಹಾ ಬರುತ್ತಾನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.